ಕರ್ನಾಟಕ ವಿಧಾನ ಸಭೆ

ಸೋಮವಾರ, ದಿನಾಂಕ ೩೦ನೇ ಜನವರಿ ೧೯೮೪

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಘಂಟೆಗೆ ಸಪಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗುಳೇದಗುಡ್ಡದ ಎಸ್. ಎಂ. ಭಂಡಾರಿ ಕಲಾ ಕಾಲೇಜಿನ ಆಟದ ಮೈದಾನಕ್ಕೆ ಹಣದ ಮಂಜೂರಾತಿ

೧೩೫ (೩೭) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಗುಳೇದಗುಡ್ಡದ ಎಸ್. ಎಂ. ಭಂಡಾರಿ ಕಲಾ ಕಾಲೇಜು ಹಾಗೂ ಆರ್.ಆರ್. ಭಂಡಾರಿ ವಾಣಿಜ್ಯ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ದಿನಾಂಕ ೨೧-೧೧-೮೧ ರಂದು ರಾಜ್ಯದ ಮಾಜಿ ವಾರ್ತಾ ಮತ್ತು ಯುವಜನ ಸೇವಾ ಸಚಿವರು ಕಾಲೇಜಿನ ಕ್ರೀಡಾ ಮೈದಾನ ಅಭಿವೃದ್ಧಿಗೆ ಸ್ಥಳದಲ್ಲಿಯೇ ೨೦,೦೦೦ ರೂ.ಗಳನ್ನು ಮಂಜೂರು ಮಾಡಿದ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಹಣವನ್ನು ಕ್ರೀಡಾ ಮೈದಾನದ ಅಭಿವೃದ್ಧಿಗೆ ಮಂಜೂರು ಮಾಡಲಾಗಿದೆಯೇ ?

ಇ) ಸಚಿವರ ಆಶ್ವಾಸನೆ ಕೇವಲ ಭರವಸೆಯಾಗಿಯೇ ಉಳಿಯುವುದೇ ?

ಶ್ರೀ ಜೀವರಾಜ ಆಳ್ವ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು).—

ಅ) ಮಾಜಿ ವಾರ್ತಾ ಮತ್ತು ಯುವಜನ ಸೇವಾ ಸಚಿವರು ಭರವಸೆ ಕೊಟ್ಟಿದ್ದು ನಿಜ.

ಆ) ಜಿಲ್ಲೆಗಳಲ್ಲಿ ಕಟ್ಟುತ್ತಿರುವ ಕ್ರೀಡಾಂಗಣಗಳಿಗೆ ಹಣವನ್ನು ವಿನಿಯೋಗಿಸುತ್ತಿರುವುದರಿಂದ ಮತ್ತು ಹಣದ ಅಭಾವ ಇರುವುದರಿಂದ ಈ ಕ್ರೀಡಾ ಮೈದಾನದ ಅಭಿವೃದ್ಧಿಗೆ ಹಣವನ್ನು ಮಂಜೂರು ಮಾಡಲಾಗಲಿಲ್ಲ

ಇ) ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಏಷ್ಯಾಡ್ ಗೇಮ್ಸ್‌ಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾವು ಅಷ್ಟು ಕೇಳುತ್ತಿಲ್ಲ. ಕೇವಲ ೨೦ ಸಾವಿರ ರೂಪಾಯಿಗಳನ್ನು ನಾವು ಕೇಳುತ್ತಿದ್ದೇವೆ. ಹಿಂದಿನ ವಾರ್ತಾ ಸಚಿವರು ಈ ವಿಷಯದಲ್ಲಿ ಭಾಷೆ ಕೊಟ್ಟಿದ್ದರು. ಅವರು ಕೊಟ್ಟಿದ್ದ ಭಾಷೆಯನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜೀವರಾಜ ಆಳ್ವ.—ಸ್ವಾಮಿ, ಏಷ್ಯಾಡ್ ಗೇಮ್ಸ್‌ಗೆ ಖರ್ಚು ಮಾಡಿರುವುದು ನಾವಲ್ಲ, ಕೇಂದ್ರ ಸರ್ಕಾರ. ನಮಗೆ ಹಣದ ಅಭಾವ ಹೆಚ್ಚಾಗಿದೆ. ಜಿಲ್ಲಾ ಕ್ರೀಡಾಂಗಣದ ಕಾರ್ಯವನ್ನು ಮೊದಲು ಮುಗಿಸಬೇಕೆಂಬುದು ಸರ್ಕಾರದ ಪ್ರಯತ್ನ. ಅದು ಮುಗಿದ ತಕ್ಷಣ ಶ್ರೀ ಬನ್ನಿ ಅವರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇವಲ ೨೦ ಸಾವಿರ ರೂಪಾಯಿಯನ್ನು ಕೇಳುತ್ತಿದ್ದಾರೆ. ಮಾನ್ಯ ಗಂಗಾಧರಗೌಡರಿಗೆ ಇವರು ಆತ್ಮೀಯ ಸ್ನೇಹಿತರಾಗಿದ್ದಾರೆ. ಆದರೂ ಇವರು ಈ ರೀತಿ ಉತ್ತರ ಕೊಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಇದನ್ನು ಸ್ನೇಹತನದಿಂದ ಪರಿಗಣಿಸಿ ಹಣವನ್ನು ಒದಗಿಸಿ ಕೊಡುತ್ತೀರಾ ?

ಡಾ।। ಜೀವರಾಜ ಆಳ್ವ.—ಮಾನ್ಯ ಸದಸ್ಯರಾದ ಬನ್ನಿಯವರು ಮತ್ತು ಚಿಮ್ಮನಕಟ್ಟಿಯವರು ಈ ಬಗ್ಗೆ ಕೇಳಿದ್ದಾರೆ. ಈ ವರ್ಷದಲ್ಲಿ ಹಣದ ಅಭಾವ ಕಡಿಮೆಯಾದರೆ ಈ ವರ್ಷದಲ್ಲೇ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿರುವ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳು

೧೩೭. (೧೦೭) ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಐ.ಎ.ಎಸ್. ಮತ್ತು ಐ.ಪಿ.ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದವರೆಷ್ಟು ಹಾಗೂ ಅನುಭವದ ಆಧಾರದ ಮೇಲೆ ಬಂದವರೆಷ್ಟು ?

ಇ) ಇವರುಗಳಲ್ಲಿ ಕರ್ನಾಟಕಕ್ಕೆ ಸೇರಿದವರ ಸಂಖ್ಯೆ ಎಷ್ಟು ?

ಈ) ಕರ್ನಾಟಕದವರು ಐ.ಎ.ಎಸ್. ಐ.ಪಿ.ಎಸ್.ಅಧಿಕಾರಿಗಳಾಗಿ ಬೇರೆ ರಾಜ್ಯಗಳಲ್ಲಿರುವವರ ಸಂಖ್ಯೆಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಐ.ಎ.ಎಸ್. ... ೧೯೧
ಐ.ಪಿ.ಎಸ್. ... ೯೯

ಆ)

	ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದವರು	ಬಡ್ತಿಯ ಮೂಲಕ ಬಂದವರು
ಐ.ಎ.ಎಸ್.	೧೪೮	೪೩
ಐ.ಪಿ.ಎಸ್.	೭೬	೨೩

ಇ) ಐ.ಎ.ಎಸ್. ೧೦೮ ಐ.ಪಿ.ಎಸ್. ೪೭

ಈ) ೩೧ (ವಿವರ ತಕ್ಷಣ ದೊರೆಯುತ್ತಿಲ್ಲ, ಮಾಹಿತಿ ಭಾರತ ಸರ್ಕಾರದಿಂದ ಬರಬೇಕಾಗಿದೆ.)

(ಮಾನ್ಯ ಸದಸ್ಯರು ಹಾಜರಿರಲಿಲ್ಲ.)